16

# “ನಾನು ನಿನಗೆ ಶಿಕ್ಷೆ ವಿಧಿಸುವದಿಲ್ಲ”

## (8:1-11)

8ನೆಯ ಅಧ್ಯಾಯವು ಯೋಹಾನನ ಇಡೀ ಸುವಾರ್ತೆಯಲ್ಲಿ ಅನೇಕರಿಗೆ ಮೆಚ್ಚಿಕೆಯಾದ ಕಥೆಯನ್ನೊಳಗೊಂಡಿದೆ. ಈ ಮೂಲ ಪಾಠವು ಹನ್ನೊಂದು ಚಿಕ್ಕ ವಚನಗಳಲ್ಲಿ ಯೇಸುವಿನ ಸೇವೆಯ ಹೃದಯವನ್ನೂ ಪ್ರಾಣವನ್ನೂ ಒಂದು ಗೂಡಿಸುತ್ತದೆ. ಬಹುಶಃ ಇದು ಮೂಲದಲ್ಲಿ ಯೋಹಾನನ ಸುವಾರ್ತೆಯ ಭಾಗವಾಗಿರದಿದ್ದರೂ,[1] ಯೇಸುವಿನ ಮರೆಯಲಾಗದ ಚಿತ್ರದಿಂದ ಬಲವಾದ ಸಂದೇಶವನ್ನು ನಮಗೆ ಕೊಡುತ್ತದೆ.

### ಯೇಸುವು ಹೇಗೆ ಒಂದು ಇಕ್ಕಟ್ಟನ್ನು ಪ್ರತಿಪಾದಿಸಿದನು (8:1-9)

ಯೇಸುವು ಎಣ್ಣೆ ಮರಗಳ ಬೆಟ್ಟಕ್ಕೆ ಹೋಗುವದರಿಂದ ಕಥೆಯು ಪ್ರಾರಂಭವಾಗುತ್ತದೆ. ಶಿಲುಬೆಗೆ ಹಾಕಲ್ಪಡುವದಕ್ಕಿಂತ ಮೊದಲಿನ ಅಂತಿಮ ವಾರದಲ್ಲಿ ಇದು ಆತನ ರೂಢಿಯಾಯಿತು.[2] ಮರುದಿನ ಪ್ರಾತಃಕಾಲದಲ್ಲಿ ಆತನು ಯೆರೂಸಲೇಮಿಗೆ ಹಿಂದಿರುಗಿದನು ಮತ್ತು ದೇವಾಲಯವನ್ನು ಪ್ರವೇಶಿಸಿದನು. ಜನರು ಆತನ ಸುತ್ತಲೂ ಕೂಡಿಬಂದಾಗ, ಆತನು ಕುಳಿತುಕೊಂಡು ಬೋಧಿಸಲಿಕ್ಕೆ ಪ್ರಾರಂಭಿಸಿದನು. ಇದು ಸಂಭವಿಸುತ್ತಿರುವಾಗ, ಶಾಸ್ತ್ರಿಗಳು ಮತ್ತು ಫರಿಸಾಯರು[3] ವ್ಯಭಿಚಾರದಲ್ಲಿ ಸಿಕ್ಕಿಬಿದ್ದ ಒಬ್ಬ ಸ್ತ್ರೀಯುನ್ನು ಯೇಸುವಿನ ಬಳಿಗೆ ತೆಗೆದು ಕೊಂಡು ಬಂದರು. ಆ ಸ್ತ್ರೀಗೆ ಚಿಂತನೆಯನ್ನಾಗಲೀ, ಕರುಣೆಯನ್ನಾಗಲೀ ತೋರಿಸದೇ ಅವರು “ಆಕೆಯನ್ನು ಮಧ್ಯದಲ್ಲಿ ನಿಲ್ಲಿಸಿದರು” (8:3), ಬಹಿರಂಗವಾಗಿ ಆಕೆಯನ್ನು ಅಪಹಾಸ್ಯಕ್ಕೆ ಗುರಿಪಡಿಸಿದರು. ಅವರ ಮುಖ್ಯ ಉದ್ದೇಶವು ಸ್ತ್ರೀಯನ್ನು ದಂಡಿಸುವದಕ್ಕಾಗಿರಲಿಲ್ಲ, ಆದರೆ ಯೇಸುವನ್ನು ಬಲೆಯಲ್ಲಿ ಸಿಕ್ಕಿಸುವದಕ್ಕಾಗಿತ್ತು ಎಂಬುದು ಬೇಗನೇ ಸ್ಪಷ್ಟವಾಯಿತು.

“ಬೋಧಕನೇ, ಈ ಹೆಂಗಸು ವ್ಯಭಿಚಾರ ಮಾಡುತ್ತಿರುವಾಗಲೇ ಕೈಗೆ ಸಿಕ್ಕಿದಳು. ಇಂಥವರನ್ನು ಕಲ್ಲೆಸೆದು ಕೊಲ್ಲಬೇಕೆಂದು ಮೋಶೆಯು ಧರ್ಮಶಾಸ್ತ್ರದಲ್ಲಿ ನಮಗೆ ಅಪ್ಪಣೆಕೊಟ್ಟಿದ್ದಾನೆ; ಈಕೆಯ ವಿಷಯದಲ್ಲಿ ನೀನು ಏನು ಹೇಳುತ್ತಿ ಎಂದು ಆತನನ್ನು ಕೇಳಿದರು” (8:4, 5). ಒಂದು ಕ್ಷಣ ಅವರು ಪರಿಪೂರ್ಣವಾದ ಬಲೆಯನ್ನು ಹಾಕಿದ್ದೇವೆಂದು ಯೋಚಿಸಿದರು. ಯೆಹೂದಿ ಕೌನ್ಸಿಲು ಪುರಾವೆಯ ಬಗ್ಗೆ ತನ್ನ ನಿಯಮಗಳಿಗೆ ಕಠಿಣವಾದದ್ದಾಗಿತ್ತು. ಸಂಶಯಗಳು ಇಲ್ಲವೇ ಸುಳ್ಳು ಸುದ್ದಿಗಳು ಇಲ್ಲವೇ ಇಬ್ಬರು ಒಂದು ಮನೆಯೊಳಗೆ ಪ್ರವೇಶಿಸುವುದು ಸಾಕಾಗಿರಲಿಲ್ಲ. ಒಬ್ಬ ವ್ಯಕ್ತಿಯ ವಿರುದ್ಧವಾಗಿ ಶಾಸ್ತ್ರಿಗಳಿಂದ ಮತ್ತು ಫರಿಸಾಯರಿಂದ ತರಲ್ಪಟ್ಟಂಥ ದೂರುಗಳನ್ನು ತರುವ ಮೊದಲು ನಿಜವಾದ ವ್ಯಭಿಚಾರಕ್ಕೆ ಪ್ರತ್ಯಕ್ಷ ಸಾಕ್ಷಿಗಳ ಅವಶ್ಯಕತೆ ಇತ್ತು.

ಯೇಸುವಿನ ವಿರೋಧಿಗಳು ತಮ್ಮ ಸಿದ್ಧತೆಯನ್ನು ಚೆನ್ನಾಗಿ ಮಾಡಿಕೊಂಡಿದ್ದರು, ಮತ್ತು ಆತನನ್ನು ಬಲೆಯಲ್ಲಿ ಹಾಕಿ ಕೊಳ್ಳುವುದು ಅವರಿಗೆ ನಿಶ್ಚಿತವಾಗಿತ್ತು. ಆ ಸ್ತ್ರೀಗೆ ಕಲ್ಲೆಸೆಯಬಾರದು ಎಂದು ಆತನು ಹೇಳಿದರೆ ಆತನು ಮೋಶೆಯ ಧರ್ಮಶಾಸ್ತ್ರವನ್ನು ಮುರಿಯುತ್ತಿರುವನಲ್ಲವೇ?[4] ಹೆಚ್ಚು ಪ್ರಮುಖ್ಯವಾದದ್ದು, ಅಂಥ ಉತ್ತರವು ಯೇಸುವು ಬಲಹೀನನೂ ಧರ್ಮಶಾಸ್ತ್ರಕ್ಕೆ ಅಪನಂಬಿಗಸ್ತನೂ ಆಗಿರುವನೆಂದು ಚಿತ್ರಿಸಲು ಶಾಸ್ತ್ರಿಗಳಿಗೂ ಫರಿಸಾಯರಿಗೂ ಅವಕಾಶ ಕೊಡುವಂಥದ್ದಾಗಿತ್ತು. ಹೀಗಿದ್ದರೂ ಆತನು ವಿರುದ್ಧವಾದ ಸ್ಥಾನವನ್ನು ತೆಗೆದುಕೊಂಡರೆ ಮತ್ತು

"ಆಕೆಗೆ ಕಲ್ಲೆಸೆಯಿರಿ!" ಎಂದು ಹೇಳಿದರೆ, ಯೇಸುವು ಒಬ್ಬ ಕ್ರಾಂತಿಕಾರನಾಗಿರುವನು ರೋಮನ್ ಕಾನೂನನ್ನು, ಉಲ್ಲಂಘಿಸಲು ಪ್ರಚೋದಿಸುವವನಾಗಿರುವನು ಎಂಬ ಆಪಾದನೆಗಳಿಗೆ ಗುರಿಯಾಗುತ್ತಿದ್ದನು ಮರಣ ಶಿಕ್ಷೆ ವಿಧಿಸುವದನ್ನು ಯೆಹೂದ್ಯರಿಗೆ ಪ್ರತಿಬಂಧಿಸಲ್ಪಟ್ಟಿತ್ತು.[5] ಯಾವುದೇ ರೀತಿಯಲ್ಲಿ ಯೇಸು ಉತ್ತರ ಕೊಟ್ಟರೂ, ಆತನನ್ನು ಸಿಕ್ಕಿಸಿ ಹಾಕುವೆವೆಂದು ಯೆಹೂದಿ ನಾಯಕರು ಯೋಚಿಸಿದ್ದರು. ಈ ಯೋಜನೆಯು ಎಷ್ಟು ಕುಯುಕ್ತಿಯುಳ್ಳದ್ದಾಗಿತ್ತೆಂಬುದನ್ನು ಅರ್ಥಮಾಡಿಕೊಳ್ಳುವಾಗ ಮಾತ್ರವೇ ಯೇಸುವು ಎಷ್ಟು ಜಾಣ್ಮೆಯಿಂದ ಉತ್ತರಕೊಟ್ಟನೆಂಬುದನ್ನು ನಾವು ಮೆಚ್ಚಿಕೊಳ್ಳುತ್ತೇವೆ.

ಅವರ ಉದ್ದೇಶಗಳು ದುಷ್ಟತನದವುಗಳಾಗಿದ್ದವು ಎಂಬುದನ್ನು ಯೇಸುವು ತಿಳಿದುಕೊಂಡನು (8:6). ಕಟ್ಟಕಡೆಗೆ, ಪುರುಷನು ಎಲ್ಲಿದ್ದಾನೆ? ವ್ಯಭಿಚಾರವು ಒಂದೇ ವ್ಯಕ್ತಿಯು ಮಾಡುವ ಪಾಪವಾಗಿರುವದಿಲ್ಲ, ಆದಾಗ್ಯೂ ಆ ಸ್ತ್ರೀಯು ಮಾತ್ರವೇ ಯೇಸುವಿನ ಬಳಿಗೆ ತರಲ್ಪಟ್ಟಳು. ಮೋಶೆಯ ಧರ್ಮಶಾಸ್ತ್ರಕ್ಕೆ ವಿಧೇಯತೆ ತೋರಿಸುವದಕ್ಕಿಂತಲೂ ಹೆಚ್ಚಾಗಿ ಯೇಸುವನ್ನು ತೊಡಕಿನಲ್ಲಿ ಸಿಕ್ಕಿಸುವದರಲ್ಲಿ ಅವರು ಆಸಕ್ತರಾಗಿದ್ದರು. ನೀತಿಯಲ್ಲ, ಆದರೆ ಬಲವು ಅವರ ಮುಖ್ಯವಾದ ಚಿಂತನೆಯಾಗಿತು.

**ಆತನು ಅವರಿಗೆ ಉತ್ತರ ಕೊಡಲಿಲ್ಲ (ವಚನ 6)**

ಯೇಸುವು ತನ್ನ ವಿರೋಧಿಗಳ "ಉತ್ತರ ಕೊಡಲಾಗದ ಪ್ರಶ್ನೆಯನ್ನು" ಎದುರಿಸಿದಾಗ, ಆತನ ಮೊದಲ ಪ್ರತಿಕ್ರಿಯೆಯು ಸಂಪೂರ್ಣವಾಗಿ ಏನೂ ಇಲ್ಲದ್ದಾಗಿತ್ತು! ಎಲ್ಲರ ಕಣ್ಣುಗಳು ಆತನ ಮೇಲಿದ್ದಾಗ, ಯೇಸುವು ಬಾಗಿಕೊಂಡು ತನ್ನ ಬೆರಳುಗಳನ್ನು ಉಪಯೋಗಿಸಿ, ನೆಲದ ಮೇಲೆ ಬರೆಯಲು ಪ್ರಾರಂಭಿಸಿದನು (8:6). ಕೆಲವು ಕ್ಷಣಗಳವರೆಗೆ ಯೇಸುವಿನ ಸುತ್ತಲೂ ಮೌನವು ಆವರಿಸಿತ್ತು. ಅವರ ಪ್ರಶ್ನೆಗೆ ಉತ್ತರ ಕೊಡುವದನ್ನು ಆತನು ನಿರಾಕರಿಸಿದನು. ಆತನು ಏನನ್ನು ಮಾಡುತ್ತಿದ್ದನು? ಆತನು ಯಾವಾಗ ಪುನಃ ಮಾತನಾಡುವನು? ಯೆಹೂದಿ ನಾಯಕರ ಮುಂದಿನ ಹೆಜ್ಜೆ ಯಾವುದು?

ಏನನ್ನು ಹೇಳದಿರುವುದು ಕೆಲವು ಸಲ ಅತ್ಯುತ್ತಮ ಕಾರ್ಯವಾಗಿರುತ್ತದೆ. ಯಾವುದೇ ಉತ್ತರವಿಲ್ಲದಿರುವುದು ಕೆಲವು ಸಲ ಅತ್ಯುತ್ತಮವಾಗಿ ಸಾಧ್ಯವಾದ ಉತ್ತರವಾಗಿರುತ್ತದೆ. ಜ್ಞಾನೋಕ್ತಿ 26:4, 5 ಹೀಗೆ ಹೇಳುತ್ತದೆ.

> ಮೂಢನ ಮೂರ್ಖತನಕ್ಕೆ ಸರಿಯಾಗಿ ಉತ್ತರ ಕೊಡಬೇಡ, ನೀನೂ ಅವನಿಗೆ ಸಮಾನನಾದೀಯೆ. ಮೂಢನ ಮೂರ್ಖತನಕ್ಕೆ ಸರಿಯಾಗಿ ಉತ್ತರಕೊಡು; ತನ್ನನ್ನು ಜ್ಞಾನಿಯೆಂದು ಎಣಿಸಿಕೊಂಡಾನು.

ಮೊದಲಿಗೆ ಈ ಎರಡು ಹೇಳಿಕೆಗಳು ಒಂದನ್ನೊಂದು ವಿರೋಧಿಸುವಂತೆ ಕಂಡು ಬರುತ್ತವೆ. ಹೀಗಿದ್ದರೂ, ಹೆಚ್ಚು ಪ್ರತಿಬಿಂಬಿಸಿ ನೋಡುವಾಗ, ಮೂರ್ಖನ ಮೂರ್ಖತೆಯಲ್ಲಿ ಉತ್ತರ ಕೊಡುವ ಒಂದು ಸಮಯವಿದೆ ಮತ್ತು ಉತ್ತರವು ಬುದ್ಧಿವಂತಿಕೆಯದಲ್ಲದ ಒಂದು ಸಮಯವಿದೆ ಎಂಬುದನ್ನು ನಾವು ಅರಿತುಕೊಳ್ಳುವೆವು. ಯೋಹಾನ 8ರಲ್ಲಿ ಉತ್ತರವು ಬುದ್ಧಿವಂತಿಕೆಗಾಗುವದಿಲ್ಲ. ಯೇಸುವಿನ ಮಾತುಗಳು ಎಷ್ಟೇ ಸತ್ಯವಾದವುಗಳಾಗಿದ್ದರೂ, ಸತ್ಯವು ಕೇಳಲ್ಪಡುತ್ತಿದ್ದಿಲ್ಲ. ಪ್ರಶ್ನೆಯು ತಿರುವುಮುರುವಾಗಿತ್ತು, ರಾಜಕೀಯ ಭಾವನೆಗಳಿಂದ ಬಹಳ ಎತ್ತರವಾಗಿತ್ತು, ಮತ್ತು ಉತ್ತರದಿಂದ ಸತ್ಯದ ಉಪಯೋಗವಾಗುತ್ತಿರಲಿಲ್ಲ. ಅಂಥ ಪರಿಸ್ಥಿತಿಯಲ್ಲಿ, ಯೇಸುವು ಏನನ್ನೂ ಹೇಳಲಿಲ್ಲ.

**ಆತನು ಗಮನವನ್ನು ಅವರ ಕಡೆಗೆ ತಿರುಗಿಸಿದನು (ವಚನಗಳು 7-9)**

ಅಂತಿಮವಾಗಿ, ಶಾಸ್ತ್ರಿಗಳೂ ಫರಿಸಾಯರೂ ಯೇಸುವು ಈ ಪ್ರಶ್ನೆಗೆ ಉತ್ತರ ಕೊಡಬೇಕೆಂದು ಪಟ್ಟು ಹಿಡಿದಾಗ, ಆತನು ಎದ್ದು ನಿಂತುಕೊಂಡು ಕ್ರೈಸ್ತರಿಂದ ಎರಡು ಸಾವಿರ ವರ್ಷಗಳಿಂದ ಪುನಃ ಪುನಃ ಹೇಳಲ್ಪಟ್ಟ ಕೆಲವು ಮಾತುಗಳನ್ನು ಹೇಳಿದನು: "ನಿಮ್ಮಲ್ಲಿ ಪಾಪವಿಲ್ಲದವನು ಯಾರೂ ಅವನೇ ಮೊದಲು ಆಕೆಯ ಮೇಲೆ ಕಲ್ಲನ್ನು ಹಾಕಲಿ" (8:7). ಆತನು ಪುನಃ ಬೊಗ್ಗಿಕೊಂಡು ನೆಲದ ಮೇಲೆ ಬರೆಯುವದನ್ನು ಮುಂದುವರಿಸಿದನು. ಪುನಃ, ಮತ್ತೊಮ್ಮೆ ಜನರ ಗುಂಪಿನ ಮೇಲೆ ನೋವಿನ ಮೌನತೆ ಆವರಿಸಿದ್ದಿರಬೇಕು. ಪ್ರತಿಯೊಬ್ಬನೂ ಯೇಸುವು ಹೇಳಿದ ಮಾತುಗಳ ಶಕ್ತಿಯನ್ನು ಅರ್ಥಮಾಡಿಕೊಳ್ಳಲು ಪ್ರಾರಂಭಿಸಿದನು.

ನೆಲದ ಮೇಲೆ ಯೇಸುವು ಏನನ್ನು ಬರೆಯುತ್ತಿದ್ದನು? ಕಥೆಯು ನಿಶ್ಚಯವಾದದ್ದನ್ನು ಹೇಳುವದಿಲ್ಲ. ಆತನು ಏನನ್ನೂ ಬರೆಯುತ್ತಿರಲಿಲ್ಲ, ಆದರೆ ತನ್ನ ವಿರೋಧಿಗಳು ಪ್ರತಿಕ್ರಿಯೆ ತೋರಿಸಲು ಅವರಿಗೆ ಸಮಯ ಕೊಟ್ಟನು ಎಂದು ಕೆಲವರು  ಸೂಚಿಸುತ್ತಾರೆ. ಆ ದಿನ ಶಾಸ್ತ್ರಿಗಳು ಮತ್ತು ಫರಿಸಾಯರು ಮಾಡುತ್ತಿದದ್ದನ್ನು ಖಂಡಿಸುವ ಪರಿಶುದ್ಧ ಬರಹದ ವಾಕ್ಯ ಭಾಗಗಳನ್ನು ಆತನು ಬರೆಯುತ್ತಿದ್ದನೆಂದು ಇತರರು ಊಹಿಸಿದರು. ಇನ್ನೂ ಕೆಲವರು ಆ ಸ್ತ್ರೀಯ ಮೇಲೆ ದೂರು ಹೇಳುವವರು ಅಪರಾಧಿಗಳಾಗಿದ್ದ ಪಾಪಗಳ ಯಾದಿಯನ್ನು ಯೇಸುವು ಬರೆಯುತ್ತಿದ್ದನು ಎಂದು ಯೋಚಿಸಿದರು. ಆತನು ತನ್ನನ್ನು ಬರೆಯಲಿ ಇಲ್ಲವೇ ಬರೆಯದೇ ಇರಲೀ, ಆತನು ಹೇಳಿದ ಆಜ್ಞೆಯ ಗಮನವನ್ನು ಆ ಸ್ತ್ರೀಯಿಂದ ತಿರುಗಿಸಿ ಆಕೆಯನ್ನು ಯೇಸುವಿನ ಬಳಿಗೆ ತಂದಿದ್ದವರ ಕಡೆಗೆ ಹರಿಸಿತು.

"ಪಾಪವಿಲ್ಲದವನು" ಎಂಬ ಮಾತುಗಳಿಂದ, ಯೇಸುವು ಯೆಹೂದಿ ನಾಯಕರನ್ನು ಇನ್ನೂ ಗುಂಪಿನ ಮಧ್ಯದಲ್ಲಿದ್ದ ಸ್ತ್ರೀಯನ್ನು ಅವರು ಅಸಮಾಧಾನಗೊಳಿಸಿದಂತೆ ಗಲಿಬಿಲಿಗೊಂಡವರನ್ನಾಗಿ ಮಾಡಿದನು. ನಮ್ಮ ಸ್ವಂತ ಪಾಪವನ್ನು ಎದುರಿಸುವುದಕ್ಕಿಂತ ಇತರ ವ್ಯಕ್ತಿಯ ಪಾಪದ ಮೇಲೆ ಬೆಳಕು ಬೀರುವುದು ಯಾವಾಗಲೂ ಹೆಚ್ಚು ಆರಾಮದಾಯಕವಾದದ್ದಾಗಿರುತ್ತದೆ. ಪ್ರಾಯಸ್ಥರನ್ನು ಪ್ರಾರಂಭಿಸಿ ಯುವಕರವರೆಗೆ ಪ್ರತಿಯೊಬ್ಬನೂ ಹೊರಟು ಹೋಗುವವರೆಗೆ ಅಸಮಾಧಾನವು ಬೆಳೆಯಿತು. ಹಿರಿಯ ಪುರುಷರು ಮೊದಲು ಹೋಗಿರಬೇಕು ಯಾಕಂದರೆ ಅವರು ಜನರ ಗುಂಪು ಏನನ್ನಾದರೂ ಮೂರ್ಖತನದ್ದನ್ನು ಮಾಡಿದ್ದರೆ; ಅದಕ್ಕೆ ಅವರೇ ಜವಾಬ್ದಾರರಾಗಿದ್ದರು. ಬಹುಶಃ ವಯಸ್ಸಾದ ಪುರುಷರು ಯೇಸುವಿನ ಉತ್ತರದ ಜ್ಞಾನವನ್ನು ಮೆಚ್ಚಿಕೊಳ್ಳುವಲ್ಲಿ ಹೆಚ್ಚು ಜ್ಞಾನಿಗಳೂ ತ್ವರಿತವಾ ದವರೂ ಆಗಿದ್ದರು. ಅವರ ಯೋಚನೆಗಳು ಏನೇ ಆಗಿದ್ದರೂ, ಆತನು ಅವರ ಉತ್ತರಿಸಲಾಗದ ಪ್ರಶ್ನೆಯನ್ನು ಅಸಾಧ್ಯವಾದ ಆಜ್ಞೆಯನ್ನಾಗಿ ತಿರುಗಿಸಿದನೆಂದು ಅವರು ತಿಳಿದುಕೊಂಡರು.

## ಒಬ್ಬ ವ್ಯಕ್ತಿಯನ್ನು ಯೇಸುವು ಹೇಗೆ ನಡಿಸಿಕೊಂಡನು (8:10, 11)

ತನ್ನ ಬಿಕ್ಕಟ್ಟನ್ನು ಪ್ರತಿಭೆಯಿಂದ ಕೈಕೊಂಡು, ಯೇಸುವು ಅನಂತರ ಒಬ್ಬ ವ್ಯಕ್ತಿಯನ್ನು ಹೇಗೆ ನಡಿಸಿಕೊಳ್ಳಬೇಕೆಂಬುದನ್ನು ಪ್ರದರ್ಶಿಸಿದನು. ಜನರು ಹೊರಟು ಹೋದನಂತರ, ಯೇಸುವು ನೆಟ್ಟಗೆ ಕುಳಿತು ಕೊಂಡು ಸುತ್ತಲೂ ನೋಡಿದನು. ದೂರಲ್ಪಟ್ಟವಳ ಕಡೆಗೆ ಯೇಸುವು ನೋಡಿದನು, "ಅಮ್ಮ, ಅವರು ಎಲ್ಲಿದ್ದಾರೆ? ನಿನಗೆ ಯಾರು ಶಿಕ್ಷೆಯನ್ನು ವಿಧಿಸಲಿಲ್ಲವೇ?" (8:10) ಎಂದು ಕೇಳಿದನು. ಈ ಹಂತದಲ್ಲಿ ಈ ಸ್ತ್ರೀಯ ಬಗ್ಗೆ ಏನನ್ನು ತಿಳಿದಿರಲಿಲ್ಲವೆಂದು ಕಂಡು ಕೊಳ್ಳುತ್ತೇವೆ. ಭಯಂಕರವಾದ ಅನ್ಯಾಯದ ಒಳ್ಳೇ ಹೃದಯದ ಒಬ್ಬ ಬಲಿಪಶುವಿನಂತೆ ಆಕೆ ಆದರ್ಶಳಾಗಿ ಮಾಡಲ್ಪಟ್ಟಿದ್ದರೂ, ಆಕೆಯ ಪಾಪವನ್ನು ಹೊರತು ಪಡಿಸಿ ಆಕೆಯ ಬಗ್ಗೆ ಏನೂ ಹೇಳಲ್ಪಟ್ಟಿರುವದಿಲ್ಲ! ಆಕೆಯು ಮೃದು ಸ್ವಭಾವದವಳೂ ಮೆಚ್ಚಿಕೆಯುಳ್ಳವಳೂ ಆಗಿದ್ದಳೋ ಇಲ್ಲವೇ ಕಠಿಣವಾದವಳೂ ಅಸಹ್ಯವಾದವುಗಳೂ ಆಗಿದ್ದಳೋ? ತನ್ನ ಮೇಲೆ ದೂರೂಕೊಟ್ಟವರ "ಮಧ್ಯದಲ್ಲಿ" ನಿಂತಿರುವಾಗ (8:3, 9), ತನ್ನ ನಾಚಿಕೆಯಿಂದ ಜಜ್ಜಲ್ಪಟ್ಟ ಒಬ್ಬ ವ್ಯಕ್ತಿಯ ಕರುಣಾಭರಿತವಾದ ಕಣ್ಣೀ

ರುಗಳನ್ನು ಸುಲಿಸುತ್ತಿದ್ದಳೋ ಇಲ್ಲವೇ ದೇವಾಲಯದ ಬಳಿಗೆ ತನ್ನನ್ನು ಎಳೆದು ಕೊಂಡು ಬಂದವರ ಕಡೆಗೆ ವಿರೋಧದಿಂದ ನೋಡುತ್ತಿದ್ದಳೋ? ಆಕೆಯ ವ್ಯಭಿಚಾರ ಮಾಡುತ್ತಿದ್ದಾಗಲೇ ಹಿಡಿಯಲ್ಪಟ್ಟಳು ಮತ್ತು ಆಕೆಯ ಪಾಪವು ದೇವಾಲಯದ ಮೈದಾನದಲ್ಲಿ ಬಹಿರಂಗವಾಗಿ ನಡಿಸಿಕೊಳ್ಳಲ್ಪಟ್ಟಿತು ಎಂಬುದನ್ನು ಮಾತ್ರ ನಾವು ತಿಳಿದಿದ್ದೇವೆ. ಈ ಕಥೆಯನ್ನು ವಿಸ್ಮಯಕರವಾದದ್ದನ್ನಾಗಿ ಮಾಡಿದ್ದು ಆ ಸ್ತ್ರೀಯಲ್ಲ, ಆದರೆ ಯೇಸುವು ಆಕೆಯ ಕಡೆಗೆ ಪ್ರತಿಕ್ರಿಯೆ ತೋರಿಸಿದ್ದಾಗಿದೆ.

**ಆತನು ಆಕೆಯನ್ನು ಗೌರವದಿಂದ ನಡಿಸಿಕೊಂಡನು**

ಜನರು ನಿನ್ನ ಬಗ್ಗೆ ಮಾತಾಡುವಾಗ ನೀನು ಎಂದಾದರೂ ಅಲ್ಲಿ ಇದ್ದಿಯೋ? ಬಹುಶಃ ಒಂದು ಮಗುವಿನಂತೆ ಇಲ್ಲವೇ ಒಬ್ಬ ರೋಗಿಯಂತೆ ಆಸ್ಪತ್ರೆಯಲ್ಲಿರುವಾಗ, ನೀನು ಅಲ್ಲಿರುವದಿಲ್ಲ ಎಂಬ ರೀತಿಯಲ್ಲಿ ಜನರು ನಿನ್ನ ಬಗ್ಗೆ ಮಾತಾಡುವದನ್ನು ಕೇಳಿಸಿ ಕೊಂಡಿರುವ ಭಯಂಕರ ವಾದ ಅನುಭವವು ನಿನಗಾಗಿರಬಹುದು. ಅದು ಮನುಷ್ಯತ್ವವನ್ನು ಹಾಳು ಮಾಡುವ ಅನುಭವವಾಗಿದೆ. ಅದು ಆ ರೀತಿಯಲ್ಲಿ ಆ ಸ್ತ್ರೀಯು ಶಾಸ್ತ್ರಿಗಳ ಮತ್ತು ಫರಿಸಾಯರ ಕೈಗಳಿಗೆ ಅಧೀನಳಾಗಿದ್ದಳು. ಆಕೆಯು ಒಂದು ಗುರಿ, ಒಂದು ಸಮಸ್ಯೆ ಆಗಿದ್ದಳು, ಅದಕ್ಕಿಂತ ಹೆಚ್ಚಾಗಿ ಇರಲಿಲ್ಲ. ಆಕೆಯನ್ನು ದೂರಿದವರು ತಲೆತಗ್ಗಿಸಿ ಹೊರಟು ಹೋಗುವಂತೆ ಮಾಡಿದ ನಂತರ, ಯೇಸುವು ತಿರುಗಿ ಕೊಂಡು ಆಕೆಯೊಂದಿಗೆ ಮಾತಾಡಿದನು. ಆಕೆಯ ಬಗ್ಗೆ ಮಾತಾಡದೇ, ಆಕೆಯೊಂದಿಗೆ ಆತನು ಮಾತಾಡಿದ್ದು ಬಹುಶಃ ಆ ಸ್ತ್ರೀಗೆ ಕೊಡಲ್ಪಟ್ಟ ಅತೀ ಅಮೂಲ್ಯವಾದ ವರವಾಗಿರುತ್ತದೆ.

ಯೇಸುವು ಆಕೆಯನ್ನು ಪೇಚಿನಲ್ಲಿ ಸಿಲುಕಿಸುವ ಸೋಲಿನಂತೆ ಇಲ್ಲವೇ ಕೆರಳಿಸುವ ತೊಂದರೆಯಂತೆ ದೃಷ್ಟಿಸಲಿಲ್ಲ; ಆಕೆಯನ್ನು ಒಬ್ಬ ವ್ಯಕ್ತಿಯಂತೆ, ದೇವರು - ಕೊಟ್ಟ ಅಮೂಲ್ಯ ಬೆಲೆಯನ್ನು ಒಳಗೊಂಡ ದೇವರ ಸೃಷ್ಟಿಯಂತೆ ನೋಡಿದನು. ಜನರೊಂದಿಗೆ ಮಾತಾಡುವುದು ಸುವಾರ್ತೆಗಳಲ್ಲಿ ಯೇಸುವಿನ ವಿಶೇಷತೆಯಾಗಿತ್ತು. ಇದಲ್ಲದೇ, ಇಂದು ಯೇಸುವು ನಮ್ಮನ್ನು ದೃಷ್ಟಿಸುವುದೂ ವಿಶೇಷವಾದದ್ದಾಗಿದೆ. ಆತನು ನಮಗೆ ಉನ್ನತವಾದ ಬೆಲೆ ಕೊಡುತ್ತಾನೆ ಹಾಗೂ ಆಳವಾಗಿ ನಮ್ಮನ್ನು ಪ್ರೀತಿಸುತ್ತಾನೆ. ನಾವು ಬಹಳಸಲ ಅಯೋಗ್ಯರೆಂದು ಭಾವಿಸುವ ಈ ಜಗತ್ತಿನಲ್ಲಿ, ಯೇಸುವು ನಮ್ಮನ್ನು ಗೌರವದಿಂದ ನಡಿಸಿಕೊಳ್ಳುತ್ತಾನೆ. ವ್ಯಭಿಚಾರದಲ್ಲಿ ಹಿಡಿಯಲ್ಪಟ್ಟ ಸ್ತ್ರೀಯೊಂದಿಗಿನ ಆತನ ಸಂದರ್ಶನವು ಆ ಸತ್ಯದ ಬಲವಾದ ಜ್ಞಾಪಿಸುವಿಕೆಯಾಗಿದೆ.

**ಆತನು ಆಕೆಯೊಂದಿಗೆ ಅನುಕಂಪದಿಂದ ನಡದುಕೊಂಡನು**

ಯೇಸುವು ಆ ಸ್ತ್ರೀಯೊಂದಿಗೆ ಗೌರವದಿಂದ ನಡದುಕೊಂಡಿದ್ದಲ್ಲದೇ, ಆಕೆಯ ಕಡೆಗಿನ ಆತನ ನಡೆಯು ಆಶ್ಚರ್ಯಕರವಾದ ಅನುಕಂಪವನ್ನು ಪ್ರದರ್ಶಿಸಿತು. ಆತನ ಮೊದಲನೆಯ ಕನಿಕರದ ಕಾರ್ಯವು ನೆಲದ ಮೇಲೆ ಬರೆದದ್ದು. ಅದು ವಿಚಿತ್ರವಾಗಿ ಕೇಳಿಸುತ್ತದೆಯೋ? ದೃಶ್ಯವನ್ನು ಪುನಃ ಕಲ್ಪಿಸಿಕೊಳ್ಳಿರಿ. ಯೇಸುವು ಬೋಧಿಸುತ್ತಿದ್ದ ದೇವಾಲಯದ ಅಂಗಳಗೊಳಗೆ ಆ ಸ್ತ್ರೀಯು ಎಳೆದು ಕೊಂಡು ತರಲ್ಪಟ್ಟಳು. ಶಾಸ್ತ್ರಿಗಳು ಮತ್ತು ಫರುಸಾಯರು ಯೇಸುವಿಗೂ ಮತ್ತು ಅಲ್ಲಿದ್ದ ಪ್ರತಿಯೊಬ್ಬರಿಗೂ ವ್ಯಭಿಚಾರದ ಕಾರ್ಯದಲ್ಲಿ ಆಕೆಯು ಹಿಡಿಯಲ್ಪಟ್ಟಿದ್ದಾಳೆ ಎಂದು ಗಟ್ಟಿಯಾಗಿ ಕೂಗಿದರು. ಪ್ರತಿಯೊಂದು ಕಣ್ಣು ಈ ಅವಮಾನಿತ ಸ್ತ್ರೀಯ ಮೇಲೆ ಇತ್ತು. ಇದಕ್ಕಿಂತ ಹೆಚ್ಚಾಗಿ ಅವಮಾನ ಪಡಿಸಿದ್ದು ಇರುವುದೋ? ಆಕೆಯ ಬಗ್ಗೆ ಏನು ಮಾಡಬೇಕೆಂದು ಯೇಸುವು ಕೇಳಲ್ಪಟ್ಟಾಗ, ಆತನು ಬಾಗಿಕೊಂಡು ನೆಲದ ಮೇಲೆ ಬರೆಯಲಿಕ್ಕೆ ಪ್ರಾರಂಭಿಸಿದನು. ಆ ಹಂತದಲ್ಲಿ, ಪ್ರತಿಯೊಬ್ಬರು ಯೇಸುವಿನ ವಿಚಿತ್ರವಾದ ಕಾರ್ಯಗಳನ್ನು ಗಮನಿಸಲು ಪ್ರಾರಂಭಿಸಿದರು. ಆತನು ಏನನ್ನು ಬರೆಯುತ್ತಿದ್ದನು? ಅದಕ್ಕೆ ಯಾವುದಾದರೂ ಅರ್ಥವಿತ್ತೋ? ಆತನು ಯಾವಾಗ ಮಾತಾಡುವನು? ಯೆಹೂದಿ ನಾಯಕರು ಆತನ ಬೋಧನೆಯಲ್ಲಿ ಯಾವುದಾದರೂ ಅಸಂಬದ್ಧತೆಯನ್ನು ಬಹಿರಂಗ ಪಡಿಸಿದರೋ? ಫಕ್ಕನೇ, ಯಾರು

ಆ ಸ್ತ್ರೀಯ ಕಡೆಗೆ ನೋಡಲಿಲ್ಲ. ಜನರ ಗುಂಪಿನ ದಿಟ್ಟಿಸಿ ನೋಡುವಿಕೆಗಳನ್ನು ಸ್ತ್ರೀಯಿಂದ ತನ್ನ ಕಡೆಗೆ ತಿರುಗಿಸಿದ್ದು ಆಕೆಗೆ ಯೇಸುವಿನ ಅನುಕಂಪದ ಮೊದಲಿನ ಅಮೂಲ್ಯವಾದ ವರವಾಗಿದೆ.

ಆಮೇಲೆ, ಆಕೆಯ ಮೇಲೆ ದೂರು ತಂದವರೆಲ್ಲರೂ ಹೊರಟು ಹೋದನಂತರ ಆ ಸ್ತ್ರೀಗೆ ಯೇಸುವಿನ ಮಾತುಗಳನ್ನು ಕೇಳುತ್ತೇವೆ; "ನಾನು ನಿನಗೆ ಶಿಕ್ಷೆ ವಿಧಿಸುವದಿಲ್ಲ; ..." (8:11ಬಿ). ಅದು ಒಂದು ಕಾನೂನಿನ ವ್ಯಕ್ತ ಪಡಿಸುವಿಕೆಯಾಗಿದ್ದು ಅದರ ಅರ್ಥ "ನಾನು ಸಹ ನಿನಗೆ ಮರಣದಂಡನೆ ವಿಧಿಸುವದಿಲ್ಲ" ಎಂದಾಗುತ್ತದೆ. ಯೇಸುವು ಜನರ ಗುಂಪಿನೊಂದಿಗೆ ತನ್ನ ಪ್ರಸಿದ್ಧಿಯನ್ನು ಕಾಪಾಡಿಕೊಳ್ಳಲು ಈ ಸ್ತ್ರೀಯ ಜೀವವನ್ನು ಬಲಿಯಾಗಿ ಕೊಡಬಹುದಿತ್ತು, ಆದರೆ ಹಾಗೆ ಮಾಡುವದನ್ನು ಯೇಸುವು ನಿರಾಕರಿಸಿದನು. ಆ ದಿನ ಅಲ್ಲಿ ಮೊದಲನೆಯ ಕಲ್ಲನ್ನು ಎಸೆಯಲು ಪ್ರತಿಯೊಂದು ಹಕ್ಕು ಇದ್ದ ಒಬ್ಬನೇ ವ್ಯಕ್ತಿಯು "ನಾನು ನಿನಗೆ, ಶಿಕ್ಷೆವಿಧಿಸುವದಿಲ್ಲ" ಎಂದು ಹೇಳಿ ದಾತನಾಗಿದ್ದನು. ಇದು ಸಾಧ್ಯವಾದ ಕನಿಕರದ ಅತೀ ದೊಡ್ಡ ವರವಾಗಿದೆ.

**ಆತನು ಆಕೆಯೊಂದಿಗೆ ಗೌರವದಿಂದ ನಡೆದುಕೊಂಡನು**

ಈ ಕಥೆಯನ್ನು ಭಾವನಾತ್ಮಕವಾದದ್ದನ್ನಾಗಿ ಮಾಡಲು ಶೋಧಿಸಲ್ಪಟ್ಟವರು, ಪಾಪದ ಮೇಲೆ ಸುಲಭವಾದ ವೃತ್ತಾಂತವು ಕಥೆಯ ಈ ಮಹತ್ವದ ಭಾಗವನ್ನು ಕಡೆಗಣಿಸುತ್ತದೆ: ಯೇಸುವು ಸ್ತ್ರೀಯನ್ನು ಆಕೆಯ ಮಾರ್ಗದ ಮೇಲೆ ಕಳುಹಿಸಿಕೊಟ್ಟಾಗ, ಆತನು "... ಇನ್ನು ಮೇಲೆ ಪಾಪಮಾಡಬೇಡ" (8:11ಸಿ) ಎಂದು ಹೇಳಿದನು. ಆಕೆಯ ಪಾಪವನ್ನು ಸಂಬೋಧಿಸುವವರಲ್ಲಿ ಆತನು ದಯೆಯುಳ್ಳವನಾಗಿದ್ದನು, ಆದರೆ ಆಕೆಯ ಪಾಪವು ಎದುರಿಸಲ್ಪಡುವಂಥದ್ದಾಗಿತ್ತು. ಇಂದು ನಮ್ಮ ಪಾಪವನ್ನು ಎದುರಿಸುವದನ್ನು ತಪ್ಪಿಸಿಕೊಳ್ಳಲು ಪ್ರಯತ್ನಿಸುವದಕ್ಕೆ ಅನೇಕ ಮಾರ್ಗಗಳಿರುತ್ತವೆ. ಪಾಪವನ್ನು ಕಡೆಗಣಿಸಲು ಪ್ರಯತ್ನಿಸುತ್ತೇವೆ ("ನಾನು ಅದರ ಬಗ್ಗೆ ಯೋಚಿಸುವುದಿಲ್ಲ"), ಪಾಪವನ್ನು ಅಲ್ಲಗಳೆಯುತ್ತಾರೆ ("ನಾನು ಯಾವ ತಪ್ಪನ್ನು ಮಾಡಲಿಲ್ಲ") ಇಲ್ಲವೇ ಪಾಪವನ್ನು ಪ್ರತಿಪಾದಿಸಿಕೊಳ್ಳುತ್ತೇವೆ. ("ನಾನು ಅದನ್ನು ನನ್ನ ತಂದೆ ತಾಯಿಗಳ, ನನ್ನ ಕೆಲಸದ ಇಲ್ಲವೇ ನನ್ನ ಸಂಸ್ಕೃತಿಯ ಕಾರಣದಿಂದ ಮಾಡಿದನು"). ಯೇಸುವು ವಿರೋಧಾಭಾಸದಿಂದ, ಮಹಿಳೆಯ ತನ್ನ ಪಾಪವನ್ನು ಎದುರಿಸುತ್ತಾಳೆ ಎಂದು ಒತ್ತಿ ಹೇಳುತ್ತಾಳೆ. ಆತನು "ಪಾಪವನ್ನು" ಪಾಪವೆಂದು ಕರೆದನು. ಅದೇ ರೀತಿಯ ನಡಿಸಿಕೊಳ್ಳುವಿಕೆಯು ಅಗತ್ಯತೆಯಾಗಿದೆ. "ಅದರ ಬಗ್ಗೆ ಚಿಂತಿಸಬೇಡ, ಅದೊಂದು ದೊಡ್ಡ ವಿಷಯವಾಗಿರುವದಿಲ್ಲ!" ಎಂದು ಹೇಳುವದರಿಂದ ಯೇಸುವು ನಮ್ಮ ಪಾಪಕ್ಕೆ ಉತ್ತರ ಕೊಡುವುದಿಲ್ಲ. ಅದರ ಬದಲು, ಪಾಪವು ಆತನ ದೊಡ್ಡ ಚಿಂತನೆಯಾಗಿದೆ, ಶಿಲುಬೆಯಷ್ಟು ದೊಡ್ಡ ಚಿಂತನೆಯಾಗಿದೆ ಎಂದು ಆತನು ಹೇಳುತ್ತಾನೆ. ವಿಮೋಚನೆಯು ಸಾಧಿಸಲ್ಪಡ ಬೇಕಾದರೆ, ನಾವು ಮೊದಲು ನಮ್ಮ ಪಾಪಗಳ ವಾಸ್ತವಿಕತೆಯನ್ನು ಅಪರಾಧವನ್ನು ಎದುರಿಸತಕ್ಕದ್ದು. ನಮ್ಮ ಪಾಪಗಳಿಗಾಗಿ ನಾವು ಎಂದೂ ಕ್ರಯಕೊಡದವರಾಗಿದ್ದರೂ, ನಮ್ಮ ಪಾಪ ಭರಿತತೆಯ ಬಗ್ಗೆ ನಾವು ಮತಾರ್ಥರಾಗಿರತಕ್ಕದ್ದು. ಇಲ್ಲದಿದ್ದರೆ, ಮಾನಸಾಂತರವು ಎಂದಿಗೂ ಬರುವುದಿಲ್ಲ. ನಮ್ಮ ಪಾಪಗಳ ಕೆಟ್ಟ ಸಮಾಚಾರವು ಎಷ್ಟು ಕೆಟ್ಟದ್ದಾಗಿದೆಯೆಂದು ನಾವು ಮೆಚ್ಚಿಕೊಳ್ಳುವವರೆಗೆ, ಸುವಾರ್ತೆಯ ಒಳ್ಳೆಯ ಸಮಾಚಾರವು ಎಷ್ಟು ಒಳ್ಳೆಯದಾಗಿದೆ ಎಂಬುದನ್ನು ಮೆಚ್ಚಿಕೊಳ್ಳಲಾರೆವು. ತನ್ನ ಜನರು ತಮ್ಮ ಪಾಪಗಳನ್ನು ಎದುರಿಸುವಲ್ಲಿ ಮತ್ತು ತಮ್ಮ ಸ್ವಂತ ಕೃತ್ಯಗಳಿಗೆ ಜವಬ್ದಾರಿಕೆ ತೆಗೆದುಕೊಳ್ಳುವಲ್ಲಿ ಪ್ರಾಮಾಣಿಕರಾಗಿರಬೇಕೆಂದು ಯೇಸುವು ಇನ್ನೂ ಒತ್ತಿ ಹೇಳುತ್ತಾನೆ.

**ಆತನು ಆಕೆಯೊಂದಿಗೆ ಕೃಪೆಯಿಂದ ಮತ್ತು ನಿರೀಕ್ಷೆಯಿಂದ ನಡದುಕೊಂಡನು**

ಯೇಸುವು ಸ್ತ್ರೀಯ ಪಾಪವನ್ನು ಕ್ಷಮಿಸಿದನೆಂದು ಈ ವಾಕ್ಯಭಾಗದಲ್ಲಿ ಏನೂ ಸೂಚಿಸಲ್ಪಟ್ಟಿರುವದಿಲ್ಲ, ಆದರೆ ಆಕೆಗೆ ಮರಣಶಿಕ್ಷೆ ವಿಧಿಸುವದನ್ನು ನಿರಾಕರಿಸಿದನು. ಆಕೆ

ಹೋಗುವ ಮೊದಲು ಆತನು ಹೇಳಿದ ಮಾತುಗಳು ಬೇತ್ಸಥಾ ಕೊಳದ ಬಳಿಯಲ್ಲಿ ಆತನು ವಾಸಿಮಾಡಿದ ನಡೆದಾಡಲಾಗದ ಮನುಷ್ಯನಿಗೆ ಹೇಳಿದ ಮಾತುಗಳು ನಮ್ಮ ಜ್ಞಾಪಕಕ್ಕೆ ಬರುತ್ತವೆ: "ನಿನಗೆ ಸ್ವಸ್ಥವಾಯಿತಲ್ಲಾ; ಇನ್ನೂ ಮೇಲೆ ಪಾಪಮಾಡಬೇಡ; ನಿನಗೆ ಹೆಚ್ಚಿನ ಕೇಡು ಬಂದೀತು" (5:14). ಯೇಸು ಏನು ಮಾಡಿದ್ದರಿಂದ ಈ ಕಥೆಯಲ್ಲಿ ಆ ಸ್ತ್ರೀಯು ಹೇಗೆ ಪ್ರಭಾವ ಹೊಂದಿದಳು ಎಂಬುದು ಹೇಳಲ್ಪಟ್ಟಿರುವದಿಲ್ಲ. ಆಕೆ ನಂಬಿದಳೋ? ಆಕೆ ತನ್ನ ಪಾಪಕ್ಕಾಗಿ ಮಾನಸಾಂತರ ಪಡಲು ಚಲಿಸಲ್ಪಟ್ಟಳೋ? ಈ ಪ್ರಶ್ನೆಗಳಿಗೆ ಉತ್ತರಗಳ ಬಗ್ಗೆ ನಮಗೆ ನಿಶ್ಚಿತತೆ ಇರುವದಿಲ್ಲ.

ಹೀಗಿದ್ದರೂ, ಯೇಸುವು ಆಕೆಗೆ ಭವಿಷ್ಯಕ್ಕೆ ನಿರೀಕ್ಷೆ ಕೊಟ್ಟನೆಂದು ನಾವು ಭರವಸೆಯುಳ್ಳವರಾಗಿರಬೇಕು. "ಇಂದಿನಿಂದ ಮುಂದೆ" (ಅಕ್ಷರಶಃವಾಗಿ "ಈಗಿನಿಂದ") ಎಂಬುದು ಮುಂದಕ್ಕೆ - ನೋಡುವುದಾಗಿದೆ. ನಾವು ತಿಳಿದಿರುವ ಒಬ್ಬನು ಒಂದು ಪ್ರತ್ಯೇಕ ವಾದ ಪಾಪದಿಂದ ಗುರುತಿಸಲ್ಪಡುವಾಗ (ಎರಡು ಸಾವಿರ ವರ್ಷಗಳ ನಂತರವೂ ಆಕೆಯ ಬಗ್ಗೆ "ವ್ಯಭಿಚಾರಿ ಸ್ತ್ರೀ" ಎಂದು ನಾವು ಇನ್ನೂ ಮಾತಾಡುತ್ತಿರುವದಿಲ್ಲವೇ?) ಪ್ರವೃತ್ತಿಯು ಯಾವಾಗಲೂ ಮುಂದಕ್ಕೆ ನೋಡುವುದರ ಬದಲು ಸಮಯದ ಹಿಂದಕ್ಕೆ ನೋಡುವುದಾಗಿರುತ್ತದೆ. ಪಾಪವು ಸಹ ಸುಲಭವಾಗಿ ಅವನ ಗುರುತಾಗುತ್ತದೆ. ಸ್ತ್ರೀಗೆ ಯೇಸುವಿನ ಮಾತುಗಳು "ನಿನ್ನ ಪಾಪಕ್ಕಿಂತ ಹೆಚ್ಚು ನಿನ್ನ ಜೀವಕ್ಕಿರುತ್ತದೆ. ನೀನು ಪಾಪದಿಂದ ಹಿಂದಿರುಗಬಹುದು" ಎಂಬ ಸಂದೇಶವನ್ನು ಕೂಗುತ್ತವೆ. ವ್ಯಭಿಚಾರೀ ಸ್ತ್ರೀಯಿಂದ ಈ ಸಂದೇಶವು ಅತ್ಯಗತ್ಯವಾಗಿತ್ತು; ಸಮಯದಲೆಲ್ಲಾ ಆಕೆಯ ಜೊತೆ ಮಾನವರೆಲ್ಲರಿಂದ ಇದು ಅತೀ ಹೆಚ್ಚು ಅಗತ್ಯವಾಗಿದ್ದ ಸಂದೇಶವಾಗಿರುತ್ತದೆ. "ಕೃಪೆಯಿಂದಲೂ ಸತ್ಯದಿಂದಲೂ" ತುಂಬಿದಾತನಾದ ಯೇಸುವು ನಮ್ಮಲ್ಲಿ ಪ್ರತಿಯೊಬ್ಬನಿಗೆ ಒಂದು ಹೊಸ ಪ್ರಾರಂಭಕ್ಕಾಗಿ ಅವಕಾಶವನ್ನು ಒದಗಿಸಿ ಕೊಡುತ್ತಾನೆ!

## ಮುಕ್ತಾಯ

8:1-11ರಲ್ಲಿಯ ಕಥೆಯು ಆ ಸ್ತ್ರೀಗೆ ಏನಾಯಿತು ಎಂದು ಆಶ್ಚರ್ಯಪಡುವುದರೊಂದಿಗೆ ನಮ್ಮನ್ನು ಬಿಡುತ್ತದೆ. ಆಕೆಯು ಯೇಸುವನ್ನು ಹಿಂಬಾಲಿಸಿದಳೋ, ಇಲ್ಲವೇ ಆಕೆ ಕೂಡಲೇ ತನ್ನ ವ್ಯಭಿಚಾರದ ಹಾಸಿಗೆಗೆ ಮರಳಿದಳೋ? ಯೇಸುವು ತನಗೆ ಕೊಟ್ಟ ಆಶ್ಚರ್ಯಕರವಾದವರವನ್ನು ಆಕೆ ಮೆಚ್ಚಿಕೊಂಡಳೆಂದು ನಾವು ಊಹಿಸಲು ಬಯಸುತ್ತೇವೆ, ಆದರೆ ಬೈಬಲ್ ನಮಗೆ ಹೇಳುವುದಿಲ್ಲ. ಬಹುಶಃ ಇದು ಆ ರೀತಿಯಲ್ಲಿ ಅತ್ಯುತ್ತಮವಾದದ್ದಾಗಿದೆ; ಯಾಕಂದರೆ ಈ ಕಥೆಯು ಪ್ರಾಥಮಿಕವಾಗಿ ನಮ್ಮೊಬ್ಬೊಬ್ಬರ ಕಥೆಯಾಗಿರುತ್ತದೆ. ಯೇಸುವಿನ ಸಂದೇಶವನ್ನು ನಾವು ಕೇಳುವಾಗ, ನಾವೂ ಸಹ ನಮ್ಮ ಪಾಪದಲ್ಲಿ "ಹಿಡಿಯಲ್ಪಡುತ್ತೇವೆ" ನಾವು ಕಂಡು ಹಿಡಿಯಲ್ಪಟ್ಟಿದ್ದೇವೆ ದೇವರು ನಮ್ಮ ಪಾಪವನ್ನು ತಿಳಿದಿರುತ್ತಾನೆ ಮತ್ತು ನಾವು ಅಪರಾಧಿಗಳಾಗಿದ್ದೇವೆ ಎಂದು ತಿಳಿದು ಕೊಳ್ಳುತ್ತೇವೆ.

ಸ್ತ್ರೀಯು ಯೇಸುವಿನ ಬಳಿಗೆ ತರಲ್ಪಟ್ಟಾಗ, ಪಾಪದಲ್ಲಿ ಆಕೆಯ ಜೊತೆಗಾರನು ತರಲ್ಪಡದೇ ಇದ್ದದಕ್ಕೆ ಕೆಲವು ಜನರು ಕೋಪಗೊಳ್ಳುತ್ತಾರೆ. ವಾಸ್ತವಿಕತೆಯಲ್ಲಿ, ಸ್ತ್ರೀಯು ಆ ದಿವಸ ಆಶೀರ್ವದಿಸಲ್ಪಟ್ಟಳು. ಆಕೆಯ ಜೊತೆಗಾರನು ಶಾಸ್ತ್ರಿಗಳ ಮತ್ತು ಫರಿಸಾಯರ ಕಣ್ಣುಗಳಿಂದ ತಪ್ಪಿಸಿಕೊಂಡು ಹೋಗಿರಬಹುದು, ಆದರೆ ಅವರು ದೇವರ ಗಮನದಿಂದ ತಪ್ಪಿಸಿಕೊಳ್ಳಲಿಲ್ಲ. ಯಶಸ್ವಿಯಾಗಿ ಅವನು ತಪ್ಪಿಸಿಕೊಂಡು ಹೋದದ್ದು, ತನ್ನ ಪಾಪದಿಂದ ತಪ್ಪಿಸಿಕೊಂಡು ಹೋಗಿದ್ದೇನೆಂದು ಯೋಚಿಸುವಲ್ಲಿ ಅವನನ್ನು ಮೂರ್ಖನನ್ನಾಗಿ ಮಾಡಿತು. ಇನ್ನೊಂದು ಕಡೆಯಲ್ಲಿ, ಆ ಸ್ತ್ರೀಯು ತನ್ನ ಪಾಪದ ವಾಸ್ತವಿಕತೆಯಿಂದ ತಪ್ಪಿಸಿಕೊಳ್ಳಲಾಗಲಿಲ್ಲ, ಪುರುಷನಲ್ಲ, ಆದರೆ ಆಕೆಯು ಹಿಂಬಾಲಿಸಿದಂಥ ಘಟನೆಗಳಿಂದ ಬಹಳ ಹೆಚ್ಚಾಗಿ ಲಾಭ ಪಡೆದು ಕೊಂಡಳು. ನಾವು ನಮ್ಮ ಪಾಪಭರಿತತೆಯನ್ನು ಅಲ್ಲಗಳೆಯುವವರೆಗೆ, ನಮ್ಮ ಪಾಪಗಳನ್ನು ಕ್ಷಮಿಸುವ ದೇವರ ಅಪೇಕ್ಷೆಯನ್ನು ನಿರಾಶೆಗೊಳಿಸುವೆವು.

ನಾವು, ಆ ಸ್ತ್ರೀಯಂತೆ ಜನರ ಗುಂಪಿನಿಂದ ತಪ್ಪು ಹೊರಿಸಲ್ಪಟ್ಟವರಾಗಿ ನಿಂತು

ಕೊಳ್ಳುವೆವು. ನಾವು ಮಾಡಿದ್ದೆಲ್ಲವನ್ನೂ ವಿಚಾರಿಸಿದ್ದೆಲ್ಲವನ್ನು ಜನರು ತಿಳಿದವರಾಗಿದ್ದರೆ, ಅವರು ನಿಜವಾಗಿಯೂ ನಮ್ಮನ್ನು ತಪ್ಪಿತಸ್ಥರನ್ನಾಗಿ ಮಾಡುವರು. ನಾವು ನಮ್ಮನ್ನು ತಿಳಿದು ಕೊಳ್ಳುವದಕ್ಕಿಂತ ಹೆಚ್ಚು ಹೆಚ್ಚು ಚೆನ್ನಾಗಿ ಯೇಸುವು ನಮ್ಮನ್ನು ತಿಳಿದುಕೊಂಡಿರುವನು; ಆದಾಗ್ಯೂ ಆತನು ಆ ಸ್ತ್ರೀಗಾಗಿ ಮಾಡಿದಂತೆ ನಮಗಾಗಿ ನಿಂತು ಕೊಳ್ಳುವನು (ಕೆಲವು ಸಲ ಬಾಗಿಕೊಳ್ಳುವನು) ಆತನು ನಮ್ಮ ಹಾಗೂ ದೂರದ ಜನರ ಗುಂಪಿನ, ನಮ್ಮ ಮತ್ತು ತಪ್ಪು ಹೊರಿಸುವಿಕೆಯ, ನಮ್ಮ ಮತ್ತು ಶಿಲುಬೆಯ ಮಧ್ಯದಲ್ಲಿ ಹೆಜ್ಜೆ ಇಡುವನು!

ಬಹುಶಃ, ದೇವಾಲಯದ ಬಳಿಯಲ್ಲಿಯ ಕೆಲವು ಜನರು ಆ ರಾತ್ರಿ ಹೊರಟು ಹೋಗಿ ಯೇಸುವು ಮಾಡಿದ್ದರಿಂದ ನ್ಯಾಯವು ಪೂರ್ತಿಗೊಳಿಸಲ್ಪಡಲಿಲ್ಲವೆಂದು ಗುಣುಗುಟ್ಟಿರ ಬಹುದು. "ಪಾಪವು ಶಿಕ್ಷಿಸಲ್ಪಡಬೇಕು" ಎಂದು ಕೆಲವರು ನಿಶ್ಚಿತವಾಗಿ ಹೇಳಿರಬಹುದು. ಅವರು ಅರ್ಥಮಾಡಿಕೊಳ್ಳದೇ ಇದ್ದದ್ದು, ಯೋಹಾನನ ಸುವಾರ್ತೆಯಲ್ಲಿ ಅನಂತರದಲ್ಲಿ ದಾಖಲೆಯಾದ ಘಟನೆಗಳಿಂದ ಪಾಪಕ್ಕೆ ಪ್ರಾಯಶ್ಚಿತ್ತವು ಕೊಡಲ್ಪಟ್ಟಿತು ಎಂಬುದನ್ನು ಗ್ರಹಿಸಿಕೊಳ್ಳದೇ ಇದದ್ದು. "ನಾನೂ ನಿನಗೆ ಶಿಕ್ಷೆ ವಿಧಿಸುವದಿಲ್ಲ" ಎಂದು ಹೇಳಿದಾತನು, "ಲೋಕದ ಪಾಪವನ್ನು ನಿವಾರಣೆಮಾಡುವ ದೇವರು ನೇಮಿಸಿದ ಕುರಿಯಾಗಿದ್ದಾನೆ!" (1:29). ಶಿಲುಬೆಯ ಮೇಲೆ ನಮ್ಮ ಪಾಪಗಳಿಗಾಗಿ ಕ್ರಯಕೊಟ್ಟನು, ಮತ್ತು ಈಗ ತಪ್ಪಿಸ್ಥರೆಂದು ತೀರ್ಮಾನಿಸಲ್ಪಟ್ಟ ಪಾಪಿಗಳಾದ ನಮಗೆ, "ನಾನು ನಿನಗೆ ಶಿಕ್ಷೆ ವಿಧಿಸುವದಿಲ್ಲ; ಹೋಗು ಇನ್ನು ಮೇಲೆ ಪಾಪ ಮಾಡ ಬೇಡ" ಎಂದು ಹೇಳುತ್ತಾನೆ.

---

ಟಿಪ್ಪಣೆಗಳು

[1]ಹೆಚ್ಚಾದ ಆಧುನಿಕ ಭಾಷಾಂತರಗಳಂತೆಯು 7:53-8:11 ವಚನಗಳನ್ನು ಕಂಸದಲ್ಲಿ ಇಡುತ್ತದೆ, ಹೆಚ್ಚಾದ ಪುರಾತನ ಕೈ ಬರಹಗಳ ಪ್ರತಿಗಳನ್ನು ಇದು ಕಂಡು ಬರುವದಿಲ್ಲ ಎಂಬ ಟಿಪ್ಪಣೆ ಇರುತ್ತದೆ. ಆ ವಾಕ್ಯಭಾಗವು ಅನಂತರದ ಗ್ರೀಕ್ ಕೈ ಬರಹದ ಕೆಲವು ಪ್ರತಿಗಳಲ್ಲಿ ಮಾತ್ರ ಕಂಡು ಬರುತ್ತದೆ. ಮತ್ತು ಹೀಗಿದ್ದರೂ ಅದು ಭಿನ್ನವಾದ ಸ್ಥಳಗಳಲ್ಲಿ ಕಂಡು ಬರುತ್ತವೆ. ಯೋಹಾನ 7:36; 7:44; 7:52; 21:25; ಮತ್ತು ಲೂಕ 21:38 ಅನುಸರಿಸಿ. ಹೀಗಿದ್ದರೂ, ಇದು ಈ ಪಠ್ಯವು ಪ್ರೇರೇಪಿಸಲ್ಪಟ್ಟಿದ್ದಲ್ಲ. "ವೃತ್ತಾಂತಕ್ಕೆ ಐತಿಹಾಸಿಕ ಸತ್ಯತೆಯು ಎಲ್ಲಾ ಗುಣಲಕ್ಷಣಗಳಿವೆ" ಎಂದು ಮೆಟ್ಜಗರ್ ಹೇಳಿದ್ದಾರೆ. (Bruce Metzger, *A Textual Commentary on the Greek New Testament* [Stuttgart, Germany: United Bible Societies, 1975], 200). ಮೂಲದಲ್ಲಿ ಯೋಹಾನನ ಸುವಾರ್ತೆಯ ಭಾಗವಲ್ಲದರ ಬಹುದಾಗಿದ್ದರೂ 7:53-8:11 ಬಹುಶಃ ಪ್ರಥಮ ಶತಮಾನದ ಕರಪತ್ರದ ರೀತಿಯಲ್ಲಿ ಆಗುವವರ ಬಾಯ ಮಾತುಗಳಿಂದ ದಾಟಿಸಲ್ಪಟ್ಟ ಸಂಗ್ರಹಿತ ಕಥೆಯಾಗಿದ್ದಿರ ಬಹುದು. ತಾನೇ ಸ್ವತಃ ನಿಲ್ಲಲು ಬಹಳ ಚಿಕ್ಕದಾಗಿದ್ದು, ಯೋಹಾನನ ಸುವಾರ್ತೆಯಲ್ಲಿ ಎಂಟನೆಯ ಅಧ್ಯಾಯದಲ್ಲಿ ಯೋಗ್ಯವಾದ ಸ್ಥಾನ ಕಂಡು ಕೊಂಡಂತೆ - ತೋರುತ್ತದೆ. [2]ಯೇಸುವು ಯೆರೂಸಲೇಮಿನಲ್ಲಿ ಹಗಲು ಹೊತ್ತಿನಲ್ಲಿ ಬೋಧಿಸಿ, ರಾತ್ರಿಯಲ್ಲಿ ಎಣ್ಣೆಮರಗಳ ಬೆಟ್ಟಕ್ಕೆ ಹೋಗುತ್ತಿದ್ದನು ಎಂದು ಲೂಕ 21:37 ಸೂಚಿಸುತ್ತದೆ. ಅದು ಬಹುಶಃ ಬೇಥಾನ್ಯದಲ್ಲಿದ್ದ ಮರಿಯಳು ಹಾಗೂ ಮಾರ್ಥಳ ಮನೆಯಾಗಿರಬಹುದು. ಅದು ಎಣ್ಣೆಮರಗಳ ಬೆಟ್ಟಕ್ಕೆ ಪೂರ್ವದ ಸಾಲುಗಳಲ್ಲಿತ್ತು. [3]"ಶಾಸ್ತ್ರಿಗಳು ಮತ್ತು ಫರಿಸಾಯರು" ಈ ಪದ ಪ್ರಯೋಗವು ಸಸಾರಾಂಶ ಸುವಾರ್ತೆಗಳಲ್ಲಿ ಪುನಃ ಪುನಃ ಕಂಡು ಬರುವಂಥದ್ದು, ಯೋಹಾನನ ಸುವಾರ್ತೆಯಲ್ಲಿ ಇಲ್ಲಿ ಮಾತ್ರವೇ ಕಂಡು ಬರುತ್ತದೆ. [4]ನೋಡಿರಿ ಯಾಜಕಕಾಂಡ 20:10; ಧರ್ಮೋಪದೇಶಕಾಂಡ 22:21-24. [5]ನೋಡಿರಿ ಯೋಹಾನ 18:31 ಅಪೊಸ್ತಲರ ಕೃತ್ಯ 7ರಲ್ಲಿ ಸ್ತೆಫನನಿಗೆ ಕಲ್ಲೆಸೆದದ್ದು ಇದಕ್ಕೆ ವ್ಯತಿರಿಕ್ತವಾದದ್ದರಂತೆ ತೋರುತ್ತದೆ, ಅದು ನಿಜವಾಗಿಯೂ ಅದೊಂದು ಕಾನೂನು ಬದ್ಧ ಮರಣದಂಡನೆಯಾಗಿರದೇ ದಂಗೆಯೆದ್ದ ಗುಂಪಿನ ಭಾವೋದ್ವೇಗದ ಕೃತ್ಯವಾಗಿತ್ತು.